## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 159 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 5-7-2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬಡ ರೈತರಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನು ಹಲವು ವರ್ಷಗಳಿಂದ ಪೋಡಿಯಾಗದೆ ಹಾಗೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಸರ್ಕಾರದಿಂದ ಮಂಜೂರಾದ ಭೂಮಿಯನು ಪೋಡಿ ಮಾಡಲು ಮಂಜೂರಾತಿ ಪಡೆದವರು ಸಲ್ಲಿಸಬೇಕಾದ ದಾಖಲಾತಿಗಳು ಯಾವುವು; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 74 ಭೂದಾಸ 2002, ದಿನಾಂಕ 30-10-2002 ರನ್ವಯ 1) ಭೂ ಮಂಜೂರಿ ಆದೇಶ 2) ಸಾಗುವಳಿ ಚೀಟಿ/ಹಕ್ಕುಪತ್ರ 3) ಅನುಮೋದಿತ ರೆವಿನ್ಯೂ ನಕ್ಷೆ ಹಾಗೂ ಅವಶ್ಯವಿರುವ ಇನ್ನಿತರೆ ದಾಖಲೆಗಳು. |
| ಇ) | ಮಂಜೂರಾತಿ ಪಡೆದವರು ಈಗಾಗಲೇ ಪೋಡಿ ಮಾಡಿಕೊಡುವಂತೆ ಸಂಬಂಧಪಟ್ಟ ಕಛೇರಿಗೆ ಅರ್ಜಿ ಸಲ್ಲಿಸಿದರೂ ಪೋಡಿ ಮಾಡಿಕೊಡದಿರಲು ಕಾರಣವೇನು; | ಭೂಮಾಪನ ಇಲಾಖೆ ಸುತ್ತೋಲೆಯನ್ವಯ ಮಂಜೂರಾದ ಜಮೀನುಗಳ ದಾಖಲೆಗಳನ್ನು ಪರಿಶೀಲಿಸಿಕೊಂಡು ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರುಗಳು ದೃಢೀಕರಿಸಿ ಅಳತೆಗೆ ಭೂಮಾಪನ ಶಾಖೆಗೆ ಕಳುಹಿಸಬೇಕು. ನಂತರ ಭೂಮಾಪನ ಶಾಖೆಯಲ್ಲಿ ನಮೂನೆ 6 ರಿಂದ 10 ಅನ್ನು ಭರ್ತಿ ಮಾಡಿ ದುರಸ್ತಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.<br>ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ.ಆರ್.ಡಿ.74.ಎಲ್.ಜಿ.ಪಿ.2009 ದಿನಾಂಕ:17.09.2009 ಮತ್ತು ಕಂಇ 08 ಎಲ್.ಜಿ.ಪಿ 2016 ದಿ: 20.06.2016 ಮತ್ತು 18.07.2016 ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗೈರು ವಿಲೇ ಕಡತ ಪುನರ್ ನಿರ್ಮಾಣದ ಸಮಿತಿಯಲ್ಲಿ ಮಂಡಿಸಿ, ಕಡತ ಪುನರ್ ನಿರ್ಮಾಣ ಮಾಡಿಕೊಂಡು ಪೋಡಿ ದುರಸ್ತಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.<br><br>ಆದರೆ ಈ ಕೆಳಕಂಡ ಕಾರಣಗಳಿಂದ ದರಖಾಸ್ತು ಪೋಡಿ ಪ್ರಕರಣಗಳ ವಿಲೇವಾರಿಗೆ ವಿಳಂಬವಾಗುತ್ತಿದೆ.<br><br>1. ಆಕಾರಬಂದು ಮತ್ತು ಪಹಣಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.<br>2. ಪಹಣಿ ಕಾಲಂ 3 ಮತ್ತು 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸಗಳಿರುವುದು.<br>3. ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ- ಇತರೆ) ಲಭ್ಯವಾಗದಿರುವುದು. |

| | | |
|---|---|---|
| | | 4. ಭೂಮಂಜೂರಾತಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯವಾಗದೇ ಇರುವುದು.<br>5. ಜಮೀನಿನ ಮೂಲ ದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಬೇಕಾಗಿರುತ್ತದೆ.<br>6. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವಿವಾದಗಳಿರುವುದು. |
| ಈ) | ಯಾವ ಕಾಲಮಿತಿಯಲ್ಲಿ ಮಂಜೂರಾತಿ ಯಾಗಿರುವ ಜಮೀನಿಗೆ ಪೋಡಿ ಮಾಡಿ ಕೊಡಲಾಗುವುದು? | ಮೇಲಿನ ಕಾರಣಗಳ ಹಿನ್ನಲೆಯಲ್ಲಿ ಮಂಜೂರಿ(ದರಖಾಸ್ತು) ಪೋಡಿ ಪ್ರಕರಣಗಳ ವಿಲೇವಾರಿಗೆ ಕಾಲಮಿತಿಯನ್ನು ನಿಗಧಿಪಡಿಸಲು ಸಾಧ್ಯವಾಗುವುದಿಲ್ಲ. |

ಕಂಇ 102 ಎಸ್‌ಎಸ್‌ಸಿ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು